ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ನಗರಾಭಿವೃದ್ಧಿ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯಮುಂದಿಡುತ್ತೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನಿಡಲಾದ ಪ್ರಶ್ನೋತ್ತರಗಳು

ರಾಜ್ಯದಲ್ಲಿರುವ ಗಿರಿಜನರ ಬಗ್ಗೆ

೧೩೫೧. ಎಂ. ಶಿವಣ್ಣ (ಹೆಚ್. ಡಿ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಗಿರಿಜನ ಪಂಗಡದವರ ಒಟ್ಟು ಸಂಖ್ಯೆ ಎಷ್ಟು ?

ಆ) ಈ ಪೈಕಿ ಎಸ್ ಎಸ್.ಎಲ್.ಸಿ. ಪಾಸದವರೆಷ್ಟು ? ಪದವೀಧರರೆಷ್ಟು ?

ಇ) ಎಷ್ಟು ಮಂದಿ ಗಿರಿಜನರು ಉದ್ಯೋಗದಲ್ಲಿದ್ದಾರೆ ? ಈ ಪೈಕಿ ಕ್ಲಾಸ್-೧, ಕ್ಲಾಸ್-೨, ಕ್ಲಾಸ್-೩ ಹಾಗೂ ಇತರ ಉದ್ಯೋಗಗಳೆಷ್ಟು ? (ಸಂಪೂರ್ಣ ವಿವರ ನೀಡುವುದು).

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೮,೨೫,೨೦೩

ಆ) ಪಾಸಾದವರು ಎಸ್.ಎಸ್.ಎಲ್.ಸಿ. ಪದವೀಧರರು

೧೭೯೯ ಈ ಸಧ್ಯ ಮಾಹಿತಿ ಲಭ್ಯವಿರುವುದಿಲ್ಲ

ಇ) ೭೩೪೬.

ಶ್ರೇಣಿವಾರು ವಿವರ ಕೆಳಕಂಡಂತಿದೆ :

ಶ್ರೇಣಿ		ಖಾಯಂ ಹುದ್ದೆಗಳು	ತಾತ್ಕಾಲಿಕ ಹುದ್ದೆಗಳು	ಒಟ್ಟು
ಅ		೧೨೯	೨೮	೧೫೭
ಆ		೧೭೭	೧೭೨	೩೪೯
ಇ		೩೩೦೧	೮೬೮	೪೧೬೯
ಈ		೨೦೬೪	೬೦೭	೨೬೭೧
	ಒಟ್ಟು	೫೬೭೧	೧೬೭೫	೭೩೪೬

ವೈದ್ಯಾಪ್ಯ ವಿಧವಾ, ಅಂಗವಿಕಲರ ವೇತನದ ಮಂಜೂರಾತಿ ಮತ್ತು ವೇತನದ ಹಂಚಿಕೆಯಲ್ಲಿ ವಿಳಂಬ

೧೬೦೦. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವೈದ್ಯಾಪ್ಯ ವೇತನ, ವಿಧವಾ ವೇತನ ಅಂಗವಿಕಲ ವೇತನ ಎಷ್ಟು ಜನರಿಗೆ ಕೊಡಲಾಗುತ್ತಿದೆ. (ಜಿಲ್ಲಾವಾರು ವಿವರ ನೀಡುವುದು)

ಆ) ಈ ಪಂಥರು ವೇತನಗಳನ್ನು ಮುಂದುವರಿಸಂವ ಯೋಜನೆ ಸರ್ಕಾರಕ್ಕಿದೆಯೇ ?

ಇ) ಈ ವೇತನಗಳು ಹಲವಾರು ಜಿಲ್ಲೆಗಳಲ್ಲಿ ೬ ತಿಂಗಳುಗಳಿಂದ ಜನರ ಕೈ ಸೇರಿಲ್ಲವೆಂಬ ದೂರು ಸರ್ಕಾರದವರ ಗಮನಕ್ಕೆ ಬಂದಿದೆಯೇ ?